ರಾನಾ ಯಾವಾಗ ನಿದ್ದೆಯಿಂದ ಎದ್ದನೋ ರಾಕಾಗೆ ಗೊತ್ತೇ ಆಗ್ಲಿಲ್ಲ. ಸ್ಟಡಿ ಟೇಬಲ್ ಮೇಲಿನ ಗಡಿಯಾರ ಎಂಟು ತೋರಿಸುತ್ತಿತ್ತು, ಅಷ್ಟೇ! ಇಷ್ಟು ಬೇಗ ಈ ಮನೇಲಿ ಯಾರೂ ಏಳುವುದಿಲ್ಲ.

ರಾನಾ ಬಾಗಿಲನ್ನು ಮೆಲ್ಲಗೆ ಮುಚ್ಚಿ ಓಡಿಹೋಗಬೇಕು ಎನ್ನುವಷ್ಟರಲ್ಲಿ ರಜಾಯಿ ಒಳಗಿಂದಲೇ ಒಂದು ಕಣ್ಣು ತೆಗೆದು ಕೂಗಿದಳು ರಾಕಾ, "ಏಯ್!"

ರಾನಾಗೆ ಸ್ವಲ್ಪ ಆಶ್ಚರ್ಯ ಆಯ್ತು. ಎರಡು ಬಾಗಿಲಿನ ಮಧ್ಯೆ ಒಂದು ಕ್ಷಣ ಬೊಂಬೆ ಥರ ನಿಂತ. ಒಂದು ಕಾಲು ಒಳಗಿಟ್ಟು ಹತ್ತಿರದಲ್ಲಿ ಯಾರೂ ಇಲ್ಲದಿದ್ದರೂ ಪಿಸುದನಿಯಲ್ಲಿ ನುಡಿದ, "ಮೊಂಟಿ ಮನೆಗೆ ಹೋಗ್ತಿದಿನಿ".

"ಇಷ್ಟು ಬೆಳಗ್ಗೆ ಅವರ ಮನೆಗೆ ಯಾಕೆ?"

"ಹತ್ತು ಗಂಟೆ ವಿಮಾನದಲ್ಲಿ ಅವರ ಮಾಮ ಬರ್ಮಿಂಗ್ ಹ್ಯಾಮ್‌ಗೆ ಹೋಗ್ತಾ ಇದ್ದಾರೆ."

ರಾಕಾ ಥಟ್ಟಂತ ಹಾಸಿಗೆ ಮೇಲೆ ಎದ್ದು ಕೂತಳು. "ಅದರಿಂದ ನಿನಗೇನು?" ದನಿಯಲ್ಲಿ ಆವೇಶವಿತ್ತು.

"ದಿನದಿನ ನಿಂದು ಹುಚ್ಚು ಜಾಸ್ತಿಯಾಗ್ತಾಯಿದೆ ಅಲ್ವಾ! ಅಮ್ಮನ ಕರೀಲಾ?"

"ಪ್ಲೀಸ್ ದೀದಿ!"

"ನೋ ಪ್ಲೀಸ್, ರಾನಾ! ಇದೇ ಕೊನೆ, ಮಾತು ಕೊಡು."

ರಾಕಾಳ ಮಾತು ಕಿವಿಗೆ ಬಿತ್ತೋ ಇಲ್ವೊ ರಾನಾ ಒಂದೇ ಏಟಿಗೆ ಕಾರ್ಪೆಟ್ ಹಾರಿ ಓಡಿಹೋದ.

ರಾಕಾ ಮತ್ತೆ ನಡುಗುವ ಚಳಿ ತಡೆಯಲಾರದೆ ರಜಾಯಿಯೊಳಗೆ ತೂರಿಕೊಂಡಳು. ಬೆಳಗಿನ ಸಿಹಿ ನಿದ್ದೆ ಮಾಡಲು ತಕ್ಕ ವಾತಾವರಣ, ಮತ್ತೆ ಮಲಗಿ ನಿದ್ದೆ ಮಾಡಿದರೆ ಎಷ್ಟು ಚೆನ್ನಾಗಿರುತ್ತೆ! ಬರೀ ಸಿಹಿ ಮುಂಜಾವು ಮಾತ್ರ ಅಲ್ಲ, ಇವತ್ತು ಭಾನುವಾರ, ರಜ!

ಅದಕ್ಕೆ ಇವತ್ತು ಅಮ್ಮ ತಡವಾಗಿ ಏಳ್ತಾಳೆ. ಸೈಫುಲ್ ಅಂಕಲ್ ಅಂತೂ ಹತ್ತು ಗಂಟೆಗೆ ಮುಂಚೆ ಏಳೋದೆ ಇಲ್ಲ.

ಮೊಂಟಿಯವರ ಮನೆ ತಮ್ಮ ಮನೆಯಿಂದ ಸರಿಯಾಗಿ ಎಷ್ಟು ದೂರ ಇರಬಹುದೆಂದು ಅಂದಾಜು ಮಾಡಲು ಪ್ರಯತ್ನಿಸಿದಳು ರಾಕಾ. ಸಬೂಜ್ ಬಾಗ್‌ನಿಂದ ಆರಾಮ್ ಬಾಗ್. ತುಂಬಾ ದೂರ ಏನಲ್ಲ. ರೈಲ್ವೇ ಲೈನ್ ದಾಟಿ ಹೋದರೆ ಬಹಳ ಹತ್ತಿರ. ಅಲ್ಲಿ ಎರಡೂ ಕಡೆ ಒಂದೂವರೆ ಆಳೆತ್ತರ ಗೋಡೆ ಇದೆ. ಆದರೂ ಅಲ್ಲಿ ಅಪಘಾತಗಳು ನಡೀತಾನೇ ಇರ್ತವೆ.

ಅವಳ ದೇಹದ ರೋಮಗಳು ನಿಮಿರಿ ನಿಂತವು. ನಗರದ ಎಲ್ಲಾ ಕಡೆ ಬಿಸಿಲು ಒಂದೇ ಸಮ ಬೀಳುತ್ತಾ? ಈ ಬಡಾವಣೆಯಲ್ಲಿ ಬಿಸಿಲು ಪರವಾಗಿಲ್ಲ. ರೈಲ್ವೇ ಲೈನ್ ಮೇಲೆ ಜಾಸ್ತಿ ಮಂಜು ಆವರಿಸಿಕೊಂಡಿದ್ದರೆ? ರಾನಾ ಲೆವೆಲ್ ಕ್ರಾಸಿಂಗ್ ದಾಟುವಾಗ ಯಾವುದಾದರೂ ರೈಲು ಬಂದರೆ ತುಂಬಾ ಆತಂಕದಿಂದ ಉತ್ಕಂಠಿತಳಾಗುವಳು. ಈಗ ತನ್ನನ್ನು ತಾನು ಸಂಭಾಳಿಸಿಕೊಂಡಳು. ನಾನೇನು ಯೋಚನೆ ಮಾಡ್ತಾ ಇದ್ದೀನಿ, ನಾಲ್ಕನೆ ಕ್ಲಾಸ್ ಹುಡುಗನಾದ್ರೆ ಏನಾಯ್ತು? ರಾನಾ ಬಹಳ ಬುದ್ಧಿವಂತ. ಜಾಣ. ಆರಾಮಾಗಿ ಮತ್ತೆ ರಜಾಯಿಯೊಳಗೆ ನುಸುಳಿದರೂ ಅವಳಿಗೆ ಸುಮ್ಮನಿರೋಕೆ ಆಗಲಿಲ್ಲ. ಅಮ್ಮನ ಮೇಲೆ ಭಯಂಕರ ಕೋಪ ಬಂತು. ಈ ಯೋಚನೆ ಮಾಡಬೇಕಾದ್ದು ಅಮ್ಮ! ಅದು ಬಿಟ್ಟು ಅವಳು ನಿದ್ದೆ ಮಾಡ್ತಾ ಇದ್ದಾಳೆ. ಇವಳು ಎದ್ದಿದ್ದಾಳೆ.

ಕೋಪ ಏರ್ತಾಏರ್ತಾ ಅದು ಭಯವಾಗಿ ಬದಲಾಯ್ತು. ಮೊಂಟಿ ಜೊತೆ ಮಾತಾಡ್ತಾ ಮಾತಾಡ್ತಾ ರಾನಾ ಲೇಟಾಗಿ ಬಂದ್ರೆ? ಅಮ್ಮ ಎದ್ದು ತಿಂಡಿ ತಿನ್ನುವಾಗ ಡೈನಿಂಗ್ ಟೇಬಲ್‌ನಲ್ಲಿ ರಾನಾ ಇಲ್ಲ ಅಂತ ಗೊತ್ತಾದ್ರೆ ಮನೆ ಹೊತ್ಕೊಂಡು ಉರಿಯುತ್ತೆ. ಕಾರಣವಿಲ್ಲದೆ ಮನೆಯಿಂದ